**PW-1**

**Cross Examination by Learned Counsel for Respondent No.02**

ಸೈಯ್ಯದ್ ಅಬ್ದುಲ್ ಹಮೀದರವರು ಅಪಘಾತದಿಂದ ಮೃತ ಪಟ್ಟಿರುತ್ತಾರೆ. ಅವರು ನನ್ನ ಅಣ್ಣ. ನಮ್ಮ ಕುಟುಂಬದ ವಂಶಾವಳಿಯನ್ನು ಹಾಜರು ಪಡಿಸಿರುತ್ತೇನೆ. ಅಪಘಾತದ ದಿನ ಮೃತರು ಶಿರಾಲಿಯಲ್ಲಿ ರಸ್ತೆಯ ಬದಿಯಲ್ಲಿ ನಿಂತುಕೊಂಡಿದ್ದರು. ಅವರು ಮಾನಸಿಕವಾಗಿ ಸ್ವಸ್ಥರಾಗಿದ್ದರು. ಅವರಿಗೆ ಅಂಗವಿಕಲ ಪ್ರಮಾಣ ಪತ್ರವನ್ನು ಮಾಡಿಸಿರುತ್ತೇವೆ. ಅದನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಒಪ್ಪಿದ್ದು ಅದನ್ನು ನಿ.ಆರ್–1 ಎಂದು ಗುರುತಿಸಲಾಯಿತು ಮತ್ತು ಅಂಗವಿಕಲ್ ಕಾರ್ಡಿನ ಕಲರ್ Xerox ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಒಪ್ಪಿದ್ದು ಅದನ್ನು ನಿ.ಆರ್–2 ಎಂದು ಗುರುತಿಸಲಾಯಿತು. ಮೃತರಿಗೆ ಯಾವ ಕಾರಣಕ್ಕಾಗಿ ನಿ.ಆರ್–1 ಮತ್ತು 2 ರಂತೆ ದಾಖಲೆಯನ್ನು ನೀಡಿದ್ದಾರೆ ಎಂದು ನನಗೆ ಗೊತಿಲ್ಲ. ಶೇಕಡಾ 70 ರಷ್ಟು ಮೆದುಳು ಕೆಲಸ ಮಾಡುತ್ತಿಲ್ಲ ಎಂದು ಹೇಳಿ ನಿ.ಆರ್–1 ಮತ್ತು 2 ರಂತೆ ದಾಖಲೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಮಾನಸಿಕ ಅಸ್ವಸ್ಥರಾಗಿದ್ದ ಕಾರಣ ಅವರನ್ನು ಮನೆಯಿಂದ ಹೊರಗೆ ಬೀಡದಂತೆ ಹೇಳಿದ್ದಾರೆ ಎಂದರೆ ಸರಿಯಲ್ಲ. ಅಪಘಾತವು ಮೋಟಾರ್ ಸೈಕಲ್ ಸವಾರನ ತಪ್ಪಿನಿಂದ ನಡೆದಿಲ್ಲ ಬದಲಿಗೆ ಮೃತರು ಮಾನಸಿಕ ಅಸ್ವಸ್ಥರಾಗಿದ್ದು ಅವರು ಮಾನಸಿಕ ಸ್ಥಿಮಿತ ಇಲ್ಲದೆ ರಸ್ತೆಗೆ ಬಂದು ಮೋಟಾರ್ ಸೈಕಲಗೆ ಬಂದು ಡಿಕ್ಕಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಶೇಕಡಾ 70 ರಷ್ಟು ಮಾನಸಿಕ ಅಸ್ವಸ್ಥ ಇದ್ದ ಕಾರಣ ಅವರನ್ನು ಒಬ್ಬರೇ ತಿರುಗಾಡಲು ಬಿಡಬಾರದು ಎಂದು ವೈದ್ಯರು ಸಲಹೆ ನೀಡಿದ್ದಾರೆ ಎಂದರೆ ಸರಿಯಲ್ಲ. ಅರ್ಜಿಯನ್ನು ಸಲ್ಲಿಸುವಾಗ ನಿ.ಆರ್–1 ಮತ್ತು 2 ರಂತೆ ಮೃತರಿಗೆ ಸರ್ಟಿಫಿಕೇಟ್ ನೀಡಿದ ವಿಚಾರ ನನಗೆ ತಿಳಿದಿತ್ತು. ಪಿರ್ಯಾದಿ ನೀಡುವ ಸಂದರ್ಭದಲ್ಲಿ ಕೂಡಾ ಈ ವಿಚಾರ ತಿಳಿದಿತ್ತು ಎಂದರೆ ಸರಿಯಲ್ಲ. ಅವರನ್ನು ಮನೆಯಿಂದ ಹೊರಗೆ ಬಿಡಬಾರದಾಗಿತ್ತು ಮತ್ತು ನಾವು ನಿರ್ಲಕ್ಷ್ಯ ವಹಿಸಿರುವ ಕಾರಣ ಮೃತರ ತಪ್ಪಿನಿಂದ ಅಪಘಾತ ನಡೆದಿದೆ ಎಂದರೆ ಸರಿಯಲ್ಲ. ಅವರು ಮಾನಸಿಕ ಅಸ್ವಸ್ಥರಾಗಿರುವ ಕಾರಣ ಅವರಿಗೆ ಮದುವೆ ಮಾಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಆದರೆ ಅವರಿಗೆ ಮದುವೆ ಆಗಿಲ್ಲ ಎಂದು ನುಡಿಯುತ್ತಾರೆ. ಮಾನಸಿಕ ಅಸ್ವಸ್ಥರಾಗಿರುವ

ಮೃತರನ್ನು ನಾನು ಸರಿಯಾಗಿ ನೋಡಿಕೊಳ್ಳದೆ ಈಗ ಪರಿಹಾರ ಕೋರಿ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಅವರು ಮಾನಸಿಕ ಅಸ್ವಸ್ಥರಾಗಿರುವ ಕಾರಣ ಅವರ ದೈನಂದಿನ ಚಟುವಟಿಕೆಗಳನ್ನು ಮಾಡಲು ಒಬ್ಬರು ಸಹಾಯಕರು ಬೇಕಾಗಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬದವರು ಮೃತರ ಬಗ್ಗೆ ಕಾಳಜಿ ವಹಿಸದೆ ಇದ್ದ ಕಾರಣ ಮತ್ತು ನಿರ್ಲಕ್ಷ್ಯ ವಹಿಸಿದ ಕಾರಣ ಅವರ ತಪ್ಪಿನಿಂದ ಅಪಘಾತ ನಡೆದಿದ್ದು, ಮೋಟಾರ್ ಸೈಕಲನ ಸವಾರ ತಪ್ಪಿನಿಂದ ಅಪಘಾತ ನಡೆದಿಲ್ಲ ಎಂದರೆ ಸರಿಯಲ್ಲ. ಮೃತರು ಮಾನಸಿಕ ಅಸ್ವಸ್ಥರಾಗಿರುವ ಕಾರಣ ಅವರಿಗೆ ರಸ್ತೆ ಸಂಚಾರ ನಿಯಮದ ಬಗ್ಗೆ ಅರಿವು ಇರಲಿಲ್ಲ ಎಂದರೆ ಸರಿಯಲ್ಲ. ಮೃತರ ಅಂತ್ಯಕ್ರಿಯೆಗೆ ಮತ್ತು ಚಿಕಿತ್ಸೆಗೆ ಖರ್ಚು ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮೃತರ ನೇರ ಸಂಬಂಧಿಕರು ಅಲ್ಲ ಎಂದರ ಸರಿಯಲ್ಲ. ಮೃತರು ನನ್ನ ಅಣ್ಣ ಮತ್ತು ಅವರಿಗೆ 30 ಸಾವಿರ ತಿಂಗಳ ಆದಾಯ ಇತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ಸವಾರನ ತಪ್ಪಿನಿಂದ ಅಪಘಾತ ನಡೆಯದೆ ಇದ್ದ ಕಾರಣ 2ನೇ ಎದ್ರುದಾರರು ಪರಿಹಾರ ಕೊಡಲು ಹೊಣೆಗಾರರು ಅಲ್ಲ ಎಂದರೆ ಸರಿಯಲ್ಲ. ಮೃತರು ತೀವ್ರತರವಾಗಿ ಮಾನಸಿಕ ಅಸ್ವಸ್ಥರಾಗಿರುವ ವಿಚಾರವನ್ನು ಮರೆ ಮಾಚಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**Cross Examination by Learned Counsel for Respondent No.01**

ಮೇಲೆ ಹೇಳಿದ ಪಾಟೀ ಸವಾಲನ್ನು ಅನುಕರಣೆ ಮಾಡುವುದಾಗಿ ಹೇಳಿರುತ್ತಾರೆ.

R.O.I.&.A.C.

Sd/-
Addl. MACT., Bhatkal